ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ಡಿಸೆಂಬರ್ 23, 2015

## ಈದ್ ಮಿಲಾದ್ : ರಾಜ್ಯದ ಮುಸಲ್ಮಾನ ಬಾಂಧವರಿಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಡಿಸೆಂಬರ್ 23 :**

ಪ್ರವಾದಿ ಮಹಮದ್ ಅವರ ಜನ್ಮದಿನವಾದ ಈದ್ ಮಿಲಾದ್ ಉನ್ನಬಿ ಹಬ್ಬದ ಸುಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ಮುಸಲ್ಮಾನ ಬಾಂಧವರಿಗೆ, ಶುಭ ಹಾರೈಸಿದ್ದಾರೆ.

ಮೊದಲು ಆಲ್ಲಾಹ್‌ನ ಪ್ರಾರ್ಥನೆ. ನಂತರ, ಪವಿತ್ರ ಕುರಾನ್‌ನ ವಾಚನ. ತದ ನಂತರ, ಕುಟುಂಬ ಸದಸ್ಯರು ಹಾಗೂ ಗೆಳೆಯರೊಂದಿಗೆ ಅದ್ದೂರಿ ಭೋಜನ. ಹೀಗೆ ಸಂತಸವನ್ನು ಹಂಚಿಕೊಳ್ಳುವ ಈದ್ ಮಿಲಾದ್ ಉನ್ನಬಿ ಹಬ್ಬವು ನಾಡಿನ ಮುಸಲ್ಮಾನ ಬಾಂಧವರೆಲ್ಲರಲ್ಲೂ ಸೋದರತೆ ಹಾಗೂ ಸೌಹಾರ್ದತೆಯ ಬಾಂಧವ್ಯವನ್ನು ಬೆಸೆಯಲು ಸ್ಫೂರ್ತಿಯನ್ನು ನೀಡಲಿ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*********

ಡಿ ಪಿ ಎಂ